# ತಾಳಿದವನು ಬಾಳಿಯಾನು



ಚಿತ್ರ: ಶಶಿಧರ್ ಹಳೇಮನಿ

ಒಂದು ಹಳ್ಳಿಯಲ್ಲಿ ಒಬ್ಬ ರೈತನು ತನ್ನ ಹೊಲದಲ್ಲಿ ಒಳ್ಳೆ ಫಸಲು ಬರಬೇಕೆಂದು ಬಹಳ ಶ್ರಮವಹಿಸಿ ಕೆಲಸ ಮಾಡುತ್ತಿದ್ದನು. ಆದರೆ ಪ್ರತಿಸಲವೂ ಒಂದೋ ಹೆಚ್ಚಿನ ಗಾಳಿಮಳೆಯಿಂದಾಗಿ, ಇಲ್ಲವೇ ಬಿಸಿಲಿನ ತಾಪಕ್ಕೆ ಅರ್ಧಕ್ಕರ್ಧ ಬೆಳೆ ನಾಶವಾಗುತ್ತಿತ್ತು. ಆಗೆಲ್ಲಾ ರೈತ ದುಃಖಿಸಿ ನೇರವಾಗಿ ದೇವರನ್ನೇ ದೂಷಿಸುತ್ತಿದ್ದ. ಒಮ್ಮೆಯಂತೂ 'ದೇವರೇ ನೀನು ನಮಗೆ ಅನುಕೂಲವಾಗುವ ಹಾಗೆ ಗಾಳಿಮಳೆಯನ್ನು ಕೊಡುವುದೇ ಇಲ್ಲ. ಒಮ್ಮೆಯಾದರೂ ಆ ವರವನ್ನು ಕೊಟ್ಟು ನೋಡು, ನಾನು ಹೇಗೆ ಬೆಳೆ ಬೆಳೆದು ತೋರಿಸುವೆ' ಎಂದ. ಆಗ ದೇವರು ಪ್ರತ್ಯಕ್ಷನಾಗಿ 'ಎಲ್ಲವೂ ನಿನ್ನಿಚ್ಛೆಯಂತೇ ಆಗಲಿ. ನಿನಗೆ ಹೇಗೆ ಬೇಕೋ ಹಾಗೆ ಹವಾಮಾನ ಬದಲಾಯಿಸಿ ಬೆಳೆ ತೆಗೆದು ತೋರಿಸು' ಎಂದು ಅದೃಶ್ಯನಾದ. ರೈತನ ಸಂತೋಷಕ್ಕೆ ಪಾರವೇ ಇಲ್ಲ. ಈಗ ಎಲ್ಲವೂ ಅವನ ಕೈಯಲ್ಲೇ. ಸಖೆ ಅನಿಸಿದಾಗೆಲ್ಲಾ ಮಳೆ ತರಿಸಿಕೊಂಡ, ಚಳಿಯಾದಾಗ ಬಿಸಿಲು ತರಿಸಿದ. ಹೊಲಕ್ಕೆ ಬಂದಾಗಲೆಲ್ಲಾ ತನಗೆ ಬೇಕಾದ ಹಾಗೆ ಬಿಸಿಲು, ಮಳೆಯನ್ನು ಬಳಸಿಕೊಂಡ. ಪೈರು ನಷ್ಟವಾಗಬಹುದೆಂಬ ಭೀತಿಯಲ್ಲಿ ಜೋರಾದ ಗಾಳಿ ಬೀಸಲು ಬಿಡಲೇ ಇಲ್ಲ. ದಿನೇ ದಿನೇ ಸೊಂಪಾಗಿ ಬೆಳೆಯುತ್ತಿದ್ದ ಬೆಳೆಗಳನ್ನು ನೋಡಿ ಖುಷಿಯಿಂದ ಕುಣಿದಾಡಿದ. ಕಟಾವು ಮಾಡಲು ಸಿದ್ಧನಾದ. ಆದರೆ ತೆನೆಗಳನ್ನು ಮುಟ್ಟಿ ನೋಡುತ್ತಿದ್ದಂತೆ ಗೋಳಾಡಿದ. ಕಾರಣ ತೆನೆಗಳಲ್ಲಿ ಬೀಜವೇ ಮೊಳೆತಿರಲಿಲ್ಲ. ಎಲ್ಲವೂ ಟೊಳ್ಳು. ಈಗಲೂ ದೇವರನ್ನೇ ದೂರಿದ. ಪ್ರತ್ಯಕ್ಷನಾದ ದೇವರು 'ನಾನೇನು ಮಾಡಿದೆ? ಎಲ್ಲವೂ ನಿನ್ನಿಚ್ಛೆಯಂತೆ ಆಗಿದೆಯಲ್ಲ. ಆದರೂ ದುಃಖವೇಕೆ?' ಎಂದಾಗ ರೈತ' ಬೆಳೆ ಸೊಂಪಾಗಿ ಬೆಳೆದಿವೆ. ಆದರೆ ಬೀಜವೇ ಇಲ್ಲದೆ ತೆನೆಗಳು ಟೊಳ್ಳಾಗಿವೆ' ಎಂದು ಕಣ್ಣೀರಿಟ್ಟ. ಆಗ ದೇವರು 'ನೀನು ಪ್ರಕೃತಿ ಮತ್ತು ಹವಾಮಾನಗಳನ್ನು ನಿನಗೆ ಬೇಕಾದಂತೆ ಉಪಯೋಗಿಸಿಕೊಂಡೆಯೇ ಹೊರತು ಫಸಲಿನ ಫಲವತ್ತತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಸಖೆ ಅನಿಸಿದಾಗ ಮಳೆ ಕರೆದೆ, ಚಳಿಯಾದಾಗ ಬಿಸಿಲು ಕರೆದೆ. ಕೊನೆಪಕ್ಷ ಜೋರು ಗಾಳಿ ಬೀಸಲೂ ಬಿಡಲಿಲ್ಲ. ಗಾಳಿಗೆ ತೆನೆಗಳು ಓಲಾಡಿ ಇನ್ನೇನು ನೆಲಕಚ್ಚುವ ಭೀತಿಯಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ಮಾಡುವ ಮೂಲಕ ಬೀಜಗಳು ಗಟ್ಟಿಗೊಳ್ಳುತ್ತಿದ್ದವು. ಬಿರುಗಾಳಿ, ಮಳೆ, ಬಿಸಿಲನ್ನು ಸಮನಾಗಿ ಎದುರಿಸಿ ಹೋರಾಟ ಮಾಡಿದ್ದರೆ ಫಸಲು ಚೆನ್ನಾಗಿಯೇ ಬರುತ್ತಿತ್ತು. ಆದರೆ ನಿನಗೆ ಬೇಕಾದ ಹಾಗೆ ಪ್ರಕೃತಿಯನ್ನು ಬದಲಿಸಿ ಬೆಳೆಗಳ ನಾಶಕ್ಕೆ ನೀನೇ ಕಾರಣನಾದೆ ' ಎಂದ. ರೈತನಿಗೆ ತಪ್ಪಿನ ಅರಿವಾಗಿ ಭಗವಂತನಲ್ಲಿ ಕ್ಷಮೆ ಕೇಳಿದ. ಇದು ಎಲ್ಲರಿಗೂ ಅನ್ವಯಿಸುವ ರೂಪಕ. ಜೀವನದಲ್ಲಿ ಕಷ್ಟ, ಸುಖ, ಸೋಲು, ಗೆಲುವು, ದುಃಖ, ಅಪಮಾನ ಎಲ್ಲಾ ಎದುರಿಸಿದ್ದೇ ಆದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ನಮ್ಮ ಶಕ್ತಿ ನಮ್ಮಲ್ಲೇ ಇದೆ. ಆದರೆ ಅದನ್ನು ತಾಳ್ಮೆ ಎಂಬ ಒರೆಗಲ್ಲಿಗೆ ಹಚ್ಚಬೇಕು. 'ತಾಳಿದವನು ಬಾಳಿಯಾನು, ತಾಳದವನು ಹಾಳಾದಾನು' ಎಂಬ ಸತ್ಯ ಅರಿತು ಬಾಳೋಣ ಅಲ್ಲವೇ.

■ ಸಂಗ್ರಹ: **ಪೂರ್ಣಿಮಾ ಆರ್. ಹೆಜಮಾಯಿ ಸಾಂಗ್ಲಿ**

# ಬೇಸಿಗೆ ರಜೆ



ಚಿತ್ರ: ವಿಜಯಕುಮಾರಿ ಆರ್.

ಬೇಸಿಗೆ ರಜೆಯು ಬಂತಪ್ಪ
ನನಗೆ ಸಂತಸ ತಂದಿತಪ್ಪ
ಅಜ್ಜಿಯ ಊರಿಗೆ ಹೋಗುವೆನು
ಆಟದಿ ರಜೆಯನು ಕಳೆಯುವೆನು!
ನದಿಯಲಿ ಈಜು ಕಲಿಯುವೆನು
ಮರವನು ಏರಿ ಜಿಗಿಯುವೆನು
ಅಜ್ಜನ ಜೊತೆಗೆ ಜಾತ್ರೆಗೆ ಹೋಗಿ
ಆಟಿಕೆ ಸಾಮಾನು ಕೊಳ್ಳುವೆನು!
ತೋಟಕೆ ಖುಷಿಯಲಿ ಹೋಗುವೆನು
ಮಾವಿನ ಹಣ್ಣನು ತಿನ್ನುವೆನು

ಸುಂದರ ಗಾಳಿಪಟವನು ಮಾಡಿ
ಆಗಸದಲ್ಲಿ ಹಾರುವೆನು!
ಹೊಲದಲಿ ಕೆಲಸವ ಮಾಡುವೆನು
ವಿಧವಿಧ ಗಿಡಗಳ ಹಚ್ಚುವೆನು
ಗೊಬ್ಬರ ನೀರು ಹಾಕಿ ಬೆಳೆಸಿ
ಹಳ್ಳಿಯ ಸುಂದರಗೊಳಿಸುವೆನು!
ಹಜ್ಜಿಯ ಕಥೆಯನು ಕೇಳುವೆನು
ಜನಪದ ಗೀತೆಯ ಹಾಡುವೆನು
ಎಲ್ಲರ ಜೊತೆಗೆ ಬೆರೆತು ನಲಿದು
ಸುಂದರ ರಜೆ ಕಳೆಯುವೆನು!

■ **ವೆಂಕಟೇಶ ಚಾಗಿ ಲಿಂಗಸುಗೂರ**